ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ICAR

ದೂರವಾಣಿ : 08192 263462
ಫ್ಯಾಕ್ಸ್: 08192 260969
ಜುಲೈ - ಸೆಪ್ಟೆಂಬರ್ 2009

ತ್ರೈಮಾಸಿಕ ಪತ್ರಿಕೆ
(Quarterly News Letter)

ಮಿಂಚಂಚೆ: dvgtkvk@yahoo.com
ಸಂಚಿಕೆ-2, ಸಂಪುಟ-4

## ಸಿಂಚನಕ್ಕೆ ಮುನ್ನ


**ಪ್ರಿಯ ಬಂಧುಗಳೇ,**

ನಿಸರ್ಗದ ವಿಚಿತ್ರವೇ ವೈಶಿಷ್ಠ ಪೂರ್ಣ: ಕಳೆದ ಜೂನ್ ಮತ್ತು ಜುಲೈ ತಿಂಗಳಲ್ಲಿ ಸುಮಾರು 41 ದಿನಗಳ ಮಳೆ ಬಾರದ ಪರಿಸ್ಥಿತಿ ಜಿಲ್ಲೆಯ ಬಹುತೇಕ ಕೃಷಿ ಆವೃತ ಭೂಮಿಯನ್ನು ಬರಗಾಲಕ್ಕೆ ನೂಕಿತ್ತು. ಆದರೆ, ಆಗಸ್ಟ್ 16 ರಿಂದ ಪ್ರಾರಂಭವಾದ ಮಳೆ, ಕ್ರಮೇಣ ಬರಗಾಲವನ್ನು ದೂರ ಮಾಡಿತು. ಈ ಮಧ್ಯೆ, ಜಿಲ್ಲೆಯ ಕೆಲವು ಭಾಗಗಳಲ್ಲಿ ಮೆಕ್ಕೆಜೋಳ ಬೆಳೆ ಸ್ವಲ್ಪ ಮಟ್ಟಿನ ನಷ್ಟವನ್ನು ಅನುಭವಿಸಿತ್ತು. ಈ ಸಂದರ್ಭದಲ್ಲಿ ಭಾರತೀಯ ಕೃಷಿ ಅನುಸಂಧಾನ ಪರಿಷತ್ ನಿಂದ ಪ್ರತಿದಿನವು ನೀಡಿದ ಹವಾಮಾನ ಆಧಾರಿತ ಕೃಷಿ ಸಲಹೆಗಳನ್ನು ಕ್ರೋಢೀಕರಿಸಿ, ಜಿಲ್ಲೆಗೆ ಅನುಗುಣವಾಗುವ ಅಂಶಗಳನ್ನು ಆಯ್ದು ದಿನಪತ್ರಿಕೆಗಳಿಗೆ ಮತ್ತು ಇತರ ಇಲಾಖೆಗಳೊಂದಿಗೆ ನಮ್ಮ ಕೇಂದ್ರದ ವತಿಯಿಂದ ರೈತರ ಅನುಕೂಲಕ್ಕಾಗಿ ಪ್ರಸರಿಸಿದೆವು.

ಪ್ರಸ್ತುತ ಮಳೆಯ ಪ್ರಮಾಣ ನಿರೀಕ್ಷೆಗಿಂತ ಹೆಚ್ಚಾಗಿ ಬರುತ್ತಿರುವುದರಿಂದ, ಅತೀವೃಷ್ಟಿಯ ಪರಿಸ್ಥಿತಿ ಹೆಚ್ಚು ಕಡಿಮೆ ಇಡೀ ಜಿಲ್ಲೆಯಲ್ಲಿ ವ್ಯಾಪಿಸಿದೆ. ಕೊಯ್ಲಿಗೆ ಸಿದ್ಧವಾಗಿರುವ ಮೆಕ್ಕೆಜೋಳ, ಕಾಳುಕಟ್ಟುವ ಹಂತದಲ್ಲಿರುವ ಭತ್ತ, ಕೊಳೆಯುತ್ತಿರುವ ಈರುಳ್ಳಿ, ಟೊಮ್ಯಾಟೋ, ಮೆಣಸಿನಕಾಯಿಗಳು, ಹಾಳಾದ ರಸ್ತೆಗಳು ಬೇಸರ ತರಿಸಿದರೆ, ಹೆಚ್ಚಿದ ಅಂತರ್ಜಲ, ಜಲಾಶಯಗಳಲ್ಲಿ ನೀರಿನ ಸಂಗ್ರಹ, ನೀರು ಬೇಡುತ್ತಿದ್ದ ತೋಟಗಳನ್ನು ಕಂಡು ಮನಸ್ಸಿಗೆ ಎಲ್ಲೋ ಒಂದೆಡೆ ಸಮಾಧಾನ.

ವಾರ್ಷಿಕ ವರದಿ (2008–09) ತಯಾರಿಸಿ, ಕೈ ಲಟಿಕೆ ತೆಗೆದು ಒಂದು ಉಸಿರೆಳೆಯುವಾಗ, 'ಕೃಷಿ ತಂತ್ರಜ್ಞಾನ ಸಪ್ತಾಹ'ದ (12–16 ಅಕ್ಟೋಬರ್ 2009) ಹಂಗಾಮ ಶುರುವಾಗಿದೆ. ಇಡೀ ತಂಡ 'ಸಪ್ತಾಹ' ದ ತಯಾರಿಯಲ್ಲಿ ಬ್ಯುಸಿ. ದೀಪಾವಳಿಯ ಹಬ್ಬದ ಶುಭಾಶಯಗಳು.

–ಸಂಪಾದಕರು



### ಹಮ್ಮಿಕೊಂಡ ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳು:

- ಜಿಲ್ಲಾ ಜಲಾನಯನ ಇಲಾಖೆ ಪ್ರಾಯೋಜಿತ 'ಮಳೆ ನೀರು ಕೊಯ್ಲು ವಿನ್ಯಾಸಗಳಲ್ಲಿ ಮೀನು ಸಾಕಾಣಿಕೆ' ಕುರಿತು ಹೊನ್ನಾಳಿ ತಾಲ್ಲೂಕು ದಿನಾಂಕ 1–7–2009 ಮತ್ತು ಚನ್ನಗಿರಿ ತಾಲ್ಲೂಕು ದಿನಾಂಕ 2–7–2009 ರಂದು ಕೇಂದ್ರದ ಮುಖ್ಯಸ್ಥರಾದ ಡಾ. ದೇವರಾಜ ಟಿ. ಎನ್. ರವರು ತರಬೇತಿಯನ್ನು ನೀಡಿರುತ್ತಾರೆ.

### ಕೇಂದ್ರದ ತಜ್ಞರು ಭಾಗವಹಿಸಿದ ಕಾರ್ಯಗಾರಗಳು/ ಕಮ್ಮಟಗಳು/ ವಿಚಾರಸಂಕಿರಣಗಳು/ ಸಭೆಗಳು/ತರಬೇತಿ ಕಾರ್ಯಕ್ರಮಗಳು:

- ದಿನಾಂಕ 21–08–2009 ರಂದು ಕೃಷಿ ವಿಶ್ವವಿದ್ಯಾನಿಲಯ ಮತ್ತು ಇಸ್ರೋ, ಬೆಂಗಳೂರು ಇವರು ಏರ್ಪಡಿಸಿದ "VRC maintainence" ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ಶ್ರೀ ರಘುರಾಜ ಜೆ. ರವರು ಭಾಗವಹಿಸಿದ್ದರ.
- ದಿನಾಂಕ 19–09–2009 ರಂದು ಕೇಂದ್ರದ ತಜ್ಞರು ಮತ್ತು ಜಿಲ್ಲೆಯ ರೈತರೊಂದಿಗೆ ಕೃಷಿ ವಿಶ್ವ ವಿದ್ಯಾನಿಲಯ, ಧಾರವಾಡ ಏರ್ಪಡಿಸಿದ್ದ ಕೃಷಿ ಮೇಳದಲ್ಲಿ ಭಾಗವಹಿಸಿ ನೂತನ ಮಾಹಿತಿ ಮತ್ತು ತಂತ್ರಜ್ಞಾನ ಪಡೆದಿರುತ್ತಾರೆ.
- ದಿನಾಂಕ 19–09–2009 ರಂದು NASC, ನವದೆಹಲಿ ಇವರು ಆಯೋಜಿಸಿದ್ದ 'ಹೈಬ್ರಿಡ್ ಮೆಕ್ಕೆಜೋಳದಲ್ಲಿ ಉತ್ಪಾದನಾ ತಾಂತ್ರಿಕತೆಗಳು' ಕಾರ್ಯಾಗಾರದಲ್ಲಿ ಕೇಂದ್ರದ ಶ್ರೀ ಮಲ್ಲಿಕಾರ್ಜುನ ಬಿ.ಓ. ರವರು ಭಾಗವಹಿಸಿದ್ದರು.
- ದಿನಾಂಕ 22–9–2009 ರಿಂದ 26–9–2009 ರವರೆಗೆ ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಮತ್ತು ಮ್ಯಾನೇಜ್ ಹೈದರಾಬಾದ್ ಇವರು ಆಯೋಜಿಸಿದ್ದ 'Horticulture Extension Management' ತರಬೇತಿ ಕಾರ್ಯಕ್ರಮದಲ್ಲಿ ಕೇಂದ್ರದ ವಿಸ್ತರಣಾ ತಜ್ಞರಾದ ಶ್ರೀ ರಘುರಾಜ್ ಜೆ ರವರು ಭಾಗವಹಿಸಿದ್ದರು.

## ಸಂಪನ್ಮೂಲ ವ್ಯಕ್ತಿಗಳಾಗಿ ಕೇಂದ್ರದ ತಜ್ಞರು:

- ದಿನಾಂಕ 8-7-2009 ರಂದು ಮತ್ತು 27-8-2009 ರಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ನಡೆದ 'ದ್ವೈಮಾಸಿಕ ಕಾರ್ಯಾಗಾರ' ದಲ್ಲಿ ಕೇಂದ್ರದ ಸಸ್ಯ ಸಂರಕ್ಷಣಾ ತಜ್ಞರಾದ ಶ್ರೀ ಪ್ರಸನ್ನಕುಮಾರ ಎನ್. ರವರು ಭಾಗವಹಿಸಿ 'ಮುಂಗಾರು ಬೆಳೆಗಳಲ್ಲಿ ಕೀಟ ಮತ್ತು ರೋಗ ನಿರ್ವಹಣೆ' ಕುರಿತು ಉಪನ್ಯಾಸ ನೀಡಿದರು.
- ದಿನಾಂಕ 23-7-2009, 28-7-2009, 4-8-2009 ಮತ್ತು 19-8-2009 ರಂದು ಜಿಲ್ಲಾ ತರಬೇತಿ ಕೇಂದ್ರ, ಕಾಡಜ್ಜಿಯಲ್ಲಿ ನಡೆದ ರೈತ ತರಬೇತಿ ಕಾರ್ಯಕ್ರಮಗಳಲ್ಲಿ ಡಾ. ಪ್ರದೀಪ್ ಎಚ್. ಎಂ. ಮತ್ತು ಶ್ರೀ ಪ್ರಸನ್ನಕುಮಾರ ಎನ್. ಮತ್ತು ಶ್ರೀ ಬಸವನಗೌಡ ಎಂ.ಜಿ. ರವರು ಭಾಗವಹಿಸಿ 'ಸಮಸ್ಯಾತ್ಮಕ ಮಣ್ಣುಗಳ ನಿರ್ವಹಣೆ', 'ಜಿಲ್ಲೆಯ ವಿವಿಧ ಮುಖ್ಯ ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಕೀಟ ಮತ್ತು ರೋಗ ನಿರ್ವಹಣೆ' ಮತ್ತು 'ತೋಟಗಾರಿಕಾ ಬೆಳೆಗಳಲ್ಲಿ ನೂತನ ತಂತ್ರಜ್ಞಾನಗಳು' ಕುರಿತು ಅನುಕ್ರಮವಾಗಿ ಉಪನ್ಯಾಸಗಳನ್ನು ನೀಡಿದರು.
- ದಿನಾಂಕ 25-8-2009 ರಂದು ಕಣಿವೆ ಬಿಳಚಿ ಮತ್ತು ಕಂಸಾಗರದಲ್ಲಿ ಕೃಷಿ ಇಲಾಖೆ ಏರ್ಪಡಿಸಿದ್ದ 'ಹಸಿರು ಹಬ್ಬದಲ್ಲಿ' ಕೇಂದ್ರದ ಶ್ರೀ ಬಸವನಗೌಡ ಎಂ.ಜಿ. ಮತ್ತು ಶ್ರೀ ಪ್ರಸನ್ನಕುಮಾರ ಎನ್. ಭಾಗವಹಿಸಿ 'ತೋಟಗಾರಿಕಾ ಬೆಳೆಯಲ್ಲಿ ಉತ್ಪಾದನಾ ತಾಂತ್ರಿಕತೆ', 'ಕೃಷಿ ಮತ್ತು ತೋಟಗಾರಿಕಾ ಬೆಳೆಗಳಲ್ಲಿ ಕೀಟ ಮತ್ತು ರೋಗ ನಿರ್ವಹಣೆ' ಬಗ್ಗೆ ಅನುಕ್ರಮವಾಗಿ ಉಪನ್ಯಾಸ ನೀಡಿದರು.
- ದಿನಾಂಕ 26-8-2009 ರಂದು ಪ್ರಗತಿ ಗ್ರಾಮೀಣ ಬ್ಯಾಂಕ್, ಕುಂಬಳೂರು ಇವರು ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಕೇಂದ್ರದ ಡಾ. ಪ್ರದೀಪ್ ಎಚ್. ಎಂ ಮತ್ತು ಶ್ರೀ ಪ್ರಸನ್ನಕುಮಾರ ಎನ್. ರವರು ಭಾಗವಹಿಸಿ 'ಭತ್ತದಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ' ಮತ್ತು 'ಭತ್ತದಲ್ಲಿ ಸಮಗ್ರ ಕೀಟ ನಿರ್ವಹಣೆ' ಬಗ್ಗೆ ಅನುಕ್ರಮವಾಗಿ ಉಪನ್ಯಾಸ ನೀಡಿದರು.
- ಪ್ರಗತಿ ಗ್ರಾಮೀಣ ಬ್ಯಾಂಕ್, ಅತ್ತಿಗೆರೆ ಇವರು ದಿನಾಂಕ 12-9-2009 ರಂದು ಏರ್ಪಡಿಸಿದ್ದ ಮಹಿಳಾ ಸಬಲೀಕರಣ ಕಾರ್ಯಾಗಾರದಲ್ಲಿ 'ಕೃಷಿ ಉತ್ಪನ್ನಗಳ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ವಿಧಾನಗಳು' ಕುರಿತು ಕೇಂದ್ರದ ಕವಿತಾ ಪಿ. ರವರು ಉಪನ್ಯಾಸ ನೀಡಿದರು.
- ದಿನಾಂಕ 15-9-2009 ರಂದು ಜಿಲ್ಲಾ ಕೃಷಿ ತರಬೇತಿ ಕೇಂದ್ರ, ಕಾಡಜ್ಜಿ ಇವರು ಏರ್ಪಡಿಸಿದ್ದ ಕಾರ್ಯಾಗಾರದಲ್ಲಿ ಕೇಂದ್ರದ ಡಾ. ಪ್ರದೀಪ್ ಎಚ್.ಎಂ. ಮತ್ತು ಶ್ರೀ ಪ್ರಸನ್ನಕುಮಾರ ಎನ್. ರವರು ಭಾಗವಹಿಸಿ 'ಸಮಸ್ಯಾತ್ಮಕ ಮಣ್ಣುಗಳ ನಿರ್ವಹಣೆ' ಮತ್ತು 'ಬೆಳೆಗಳಲ್ಲಿ ಸಮಗ್ರ ಪೀಡೆ ನಿರ್ವಹಣೆ' ಕುರಿತು ಅನುಕ್ರಮವಾಗಿ ಉಪನ್ಯಾಸ ನೀಡಿದರು.
- ದಿನಾಂಕ 17-9-2009 ರಂದು 'ರ್‍ಯಾಲೀಸ್ ಇಂಡಿಯಾ ಲಿಮಿಟೆಡ್' ಇವರು ಹಳೇ ಕುಂದವಾಡದಲ್ಲಿ ಏರ್ಪಡಿಸಿದ್ದ ವಿಚಾರಸಂಕೀರಣದಲ್ಲಿ ಕೇಂದ್ರದ ಶ್ರೀ ಪ್ರಸನ್ನಕುಮಾರ ಎನ್. ಭಾಗವಹಿಸಿ 'ಭತ್ತದಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆಯ' ಬಗ್ಗೆ ಅನುಕ್ರಮವಾಗಿ ಉಪನ್ಯಾಸ ನೀಡಿದರು.

## ಈ ಟಿವಿ ಕನ್ನಡ 'ಅನ್ನದಾತ' ದಲ್ಲಿ ಬಿತ್ತರಗೊಂಡ ಕಾರ್ಯಕ್ರಮಗಳು:

- ದಿನಾಂಕ 1-8-2009 ರಂದು 'ಬಿ.ಟಿ. ಹತ್ತಿಯಲ್ಲಿ ರಸಗೊಬ್ಬರ ನಿರ್ವಹಣೆ' – ಶ್ರೀ ಮಲ್ಲಿಕಾರ್ಜುನ ಬಿ.ಓ.
- ದಿನಾಂಕ 3-8-2009 ರಂದು 'ಅಜೋಲ್ಲಾ ಉತ್ಪಾದನೆ ಮತ್ತು ಮೇವಾಗಿ ಬಳಕೆ' ಡಾ. ಜಯದೇವಪ್ಪ ಜಿ.ಕೆ.
- ದಿನಾಂಕ 3-8-2009 ರಂದು 'ತಡವಾಗಿ ಬಿತ್ತನೆಯಾದ ಮೆಕ್ಕೆಜೋಳದಲ್ಲಿ ಉತ್ಪಾದನಾ ತಾಂತ್ರಿಕತೆಗಳು – ಶ್ರೀ ಮಲ್ಲಿಕಾರ್ಜುನ ಬಿ.ಓ.
- ದಿನಾಂಕ 9-8-2009 ರಂದು 'ಬಿ.ಟಿ. ಹತ್ತಿಯಲ್ಲಿ ರಸ ಹೀರುವ ಕೀಟಗಳ ನಿರ್ವಹಣೆ'– ಶ್ರೀ ಪ್ರಸನ್ನಕುಮಾರ ಎನ್.
- ದಿನಾಂಕ 10-8-2009 ರಂದು 'ಜಾನುವಾರುಗಳಲ್ಲಿ ಆಹಾರ ಬಳಕೆ'– ಡಾ. ಜಯದೇವಪ್ಪ ಜಿ.ಕೆ.
- ದಿನಾಂಕ 11-8-2009 ರಂದು 'ಕ್ಯಾವೆಂಡಿಷ್ ಬಾಳೆ (ಪಚ್ಚಬಾಳೆ)'ಯಲ್ಲಿ ಎಲೆ ಚುಕ್ಕೆರೋಗದ ನಿರ್ವಹಣೆ. – ಶ್ರೀ ಪ್ರಸನ್ನಕುಮಾರ ಎನ್.
- ದಿನಾಂಕ 15-8-2009 ರಂದು 'ಅಡಿಕೆಯಲ್ಲಿ ಅಣಬೆ ರೋಗ ನಿರ್ವಹಣೆ'– ಶ್ರೀ ಬಸವನಗೌಡ ಎಂ.ಜಿ. ಮತ್ತು – ಶ್ರೀ ಪ್ರಸನ್ನಕುಮಾರ ಎನ್.
- ದಿನಾಂಕ 25-8-2009 ರಂದು 'ಬನಾನಾ ಸ್ಪೆಷಲ್ ಬಳಕೆಯಿಂದ ಬಾಳೆಯಲ್ಲಿ ಲಘುಪೋಷಕಾಂಶಗಳ ಕೊರತೆಯ ನಿರ್ವಹಣೆ' – ಶ್ರೀ ಬಸವನಗೌಡ ಎಂ.ಜಿ.
- ದಿನಾಂಕ 12-9-2009 ರಂದು 'ಅಧಿಕ ಇಳುವರಿಗೆ ಬಿ.ಟಿ. ಹತ್ತಿಯಲ್ಲಿ ಸುಧಾರಿತ ಬೇಸಾಯಕ್ರಮಗಳು' –ಶ್ರೀ ಮಲ್ಲಿಕಾರ್ಜುನ ಬಿ.ಓ.
- ದಿನಾಂಕ 24-9-2009 ರಂದು 'ಕಲ್ಲಂಗಡಿಯಲ್ಲಿ ಮೋಹಕ ಬಲೆ ಬಳಕೆಯಿಂದ ಹಣ್ಣುನೊಣಗಳ ನಿರ್ವಹಣೆ' – ಶ್ರೀ ಪ್ರಸನ್ನಕುಮಾರ ಎನ್.
- ದಿನಾಂಕ 28-9-2009 'ಹಿಂಗಾರಿನಲ್ಲಿ ಸೂರ್ಯಕಾಂತಿ ಬೆಳೆಯ ಉತ್ಪಾದನಾ ತಾಂತ್ರಿಕತೆಗಳು'– ಶ್ರೀ ಮಲ್ಲಿಕಾರ್ಜುನ ಬಿ.ಓ.

## ಆಕಾಶವಾಣಿ ಭದ್ರಾವತಿಯಲ್ಲಿ ಬಿತ್ತರಗೊಂಡ ಕಾರ್ಯಕ್ರಮಗಳು:

- ದಿನಾಂಕ 6-7-2009 ರಂದು 'ಸೋಯಾಬಿನ್ ಉತ್ಪಾದನಾ ತಾಂತ್ರಿಕತೆಗಳು'- ಶ್ರೀ ಮಲ್ಲಿಕಾರ್ಜುನ ಬಿ.ಓ.
- ದಿನಾಂಕ 14-9-2009 ರಂದು 'ಸಾವಯವ ಹತ್ತಿ ಬೇಸಾಯ ಪದ್ಧತಿಗಳು' - ಶ್ರೀ ಮಲ್ಲಿಕಾರ್ಜುನ ಬಿ.ಓ.

## ಪತ್ರಿಕಾ ಲೇಖನಗಳು:

- ದಿನಾಂಕ 12-7-2009 ರಂದು 'ಜನತಾವಾಣಿ' 'ರಸಗೊಬ್ಬರಕ್ಕೆ ಬೇಡ ಹಾಹಾಕಾರ' - ಶ್ರೀ ಬಸವನಗೌಡ ಎಂ.ಜಿ.
- ದಿನಾಂಕ 13-9-2009 ರಂದು 'ಜನತಾವಾಣಿ' 'ಬಾಳೆ ಬಂಗಾರ ಮಾಡುವ ಬಾಳೆ ಸ್ಪೆಷಲ್'-ಶ್ರೀ ಬಸವನಗೌಡ ಎಂ.ಜಿ.

## ಕೃಷಿ ಮಾಹಿತಿ ಶಿಬಿರಗಳು:



- ದಿನಾಂಕ 28-7-2009 - ಬೆಂಚಿಕಟ್ಟೆ, ಜಗಳೂರು ತಾಲ್ಲೂಕು
- ದಿನಾಂಕ 30-7-2009 ಕೈದಾಳೆ ಕ್ಯಾಂಪ್, ದಾವಣಗೆರೆ ತಾಲ್ಲೂಕು
- ದಿನಾಂಕ 5-8-2009 ಓಬಣ್ಣನಹಳ್ಳಿ, ದಾವಣಗೆರೆ ತಾಲ್ಲೂಕು

## ಆಚರಿಸಿದ ವಿಶೇಷ ಕಾರ್ಯಕ್ರಮಗಳು:



ದಿನಾಂಕ 10-7-2009 ರಂದು 'ರಾಷ್ಟ್ರೀಯ ಮೀನು ಕೃಷಿಕರ ದಿನಾಚರಣೆ'.



ದಿನಾಂಕ 26-8-2009 ರಂದು 'ವಿಶ್ವ ಕೈತೋಟ ದಿನಾಚರಣೆಯನ್ನು' ಜಗಳೂರು ತಾಲ್ಲೂಕು ಓಬಳಾಪುರದಲ್ಲಿ ಆಚರಿಸಲಾಯಿತು.



ದಿನಾಂಕ 26-8-2009 ರಂದು 'ಪಾರ್ಥೇನಿಯಮ್ ಕಳೆ ನಿರ್ಮೂಲನಾ ಸಪ್ತಾಹವನ್ನು' ಜಗಳೂರು ತಾಲ್ಲೂಕು ಓಬಳಾಪುರದಲ್ಲಿ ಆಚರಿಸಲಾಯಿತು.

## ರೈತಕ್ಷೇತ್ರ ಪಾಠಶಾಲೆ:

ದಾವಣಗೆರೆ ತಾಲ್ಲೂಕಿನ ಹಳೇಬಿಸಲೇರಿ ಗ್ರಾಮದಲ್ಲಿ 'ಭತ್ತದಲ್ಲಿ ಸಮಗ್ರ ಬೆಳೆ ನಿರ್ವಹಣೆ' ಕುರಿತು "ರೈತ ಕ್ಷೇತ್ರ ಪಾಠಶಾಲೆ "ಯನ್ನು ಹಮ್ಮಿಕೊಂಡಿದ್ದು, 25 ರೈತರಿಗೆ ಈ ಕೆಳಗಿನ ವಿಷಯಗಳ ಬಗ್ಗೆ ತರಬೇತಿ ನೀಡಲಾಗಿದೆ:

| ದಿನಾಂಕ | ತರಬೇತಿ ವಿಷಯ |
|---|---|
| 30-6-2009 | ಭತ್ತದಲ್ಲಿ ನಾಟಿ ಪೂರ್ವ ಕಾರ್ಯಗಳು |
| 13-7-2009 | ಗೊಬ್ಬರ ನಿರ್ವಹಣೆ ಮತ್ತು ಜೈವಿಕ ಗೊಬ್ಬರ ಬಳಕೆ (Azospirillum) |
| 3-8-2009 | ಭತ್ತದಲ್ಲಿ ಲಘುಪೋಷಕಾಂಶಗಳ ಬಳಕೆ (Zinc) |
| 31-8-2009 | ಭತ್ತದಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ |
| 10-9-2009 | ಭತ್ತದಲ್ಲಿ ಸಮಗ್ರ ಪೀಡೆ ನಿರ್ವಹಣೆ |

# ಕೃಷಿ ಮುನ್ಸೂಚನೆಗಳು:

**ಅಡಿಕೆ:** ಜಿಲ್ಲೆಯಾದ್ಯಂತ ಮಳೆ ಹೆಚ್ಚಾಗಿರುವುದರಿಂದ ಅಡಿಕೆ ಬೆಳೆಯಲ್ಲಿ ಕೊಳೆರೋಗದ ಬಾಧೆ ಹೆಚ್ಚಾಗಬಹುದು. ಇದರ ನಿಯಂತ್ರಣಕ್ಕೆ ಶೇ. 1 ರ ಬೋರ್ಡೋ ದ್ರಾವಣ ಅಥವಾ 3 ಗ್ರಾಂ ತಾಮ್ರದ ಆಕ್ಸಿಕ್ಲೋರೈಡ್ ಅಥವಾ 3 ಗ್ರಾಂ ಫಾಸಟೈಲ್ ಎ.ಎಲ್ ಪ್ರತಿ ಲೀಟರ್ ನೀರಿನಲ್ಲಿ ಬೆರಸಿ ಸಿಂಪಡಿಸಬೇಕು.

**ಬಾಳೆ:** ಬಾಳೆ ಬೆಳೆಗೆ ಮುಖ್ಯ ಪೋಷಕಾಂಶಗಳ ಜೊತೆಗೆ ಲಘು ಪೋಷಕಾಂಶಗಳನ್ನು ನೀಡುವುದು ಪ್ರಮುಖ ಅಂಶವಾಗಿದೆ. ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರ, ಬೆಂಗಳೂರು ಇವರು ಅಭಿವೃದ್ಧಿ ಪಡಿಸಿರುವ **"ಬನಾನ ಸ್ಪೆಷಲ್"** ಲಘು ಪೋಷಕಾಂಶದ ಮಿಶ್ರಣವನ್ನು 5 ಗ್ರಾಂ ಪ್ರತಿ ಲೀಟರ್ ನೀರಿನಲ್ಲಿ ಬೆರಸಿ ಸಿಂಪರಣೆ ಮಾಡಬೇಕು. ಸಿಂಪರಣೆಯನ್ನು 5, 6, 7, 8 ನೇ ತಿಂಗಳು, ಗೊನೆ ಬಂದ ನಂತರ, ಗೊನೆ ಬಂದ ಒಂದು ತಿಂಗಳ ನಂತರ ಒಟ್ಟು 6 ಸಾರಿ ಕೊಡಬೇಕು. ಇದರಿಂದ ಗೊನೆಗಳ ತೂಕ ಹೆಚ್ಚುವುದಲ್ಲದೆ, ಕಾಯಿಗಳ ಗುಣಮಟ್ಟವೂ ಉತ್ತಮವಾಗಿರುತ್ತದೆ.

**ಸೂರ್ಯಕಾಂತಿ:** KBSH-53 ತಳಿಯ ಬಳಕೆ ಮಾಡಿ ಇದು ಬೂದಿ ರೋಗ ತಡೆಗಟ್ಟುವ ಶಕ್ತಿ ಹೊಂದಿದೆ. ಪ್ರತಿ ಗುಣಿಗೆ ಎರಡೆರಡು ಹಾಕುವುದರಿಂದ ಸಸ್ಯ ಸಂಖ್ಯೆ ಕಾಪಾಡಲು ಸಾಧ್ಯವಾಗುವುದು, ಬಿತ್ತಿದ 15-20 ದಿನಗಳಲ್ಲಿ ಪ್ರತಿ ಗುಣಿಗೆ ಒಂದೇ ಸಸಿ ಬಿಟ್ಟು ಉಳಿದ ಸಸಿಯನ್ನು ತೆಗೆಯಬೇಕು. ಹೂವ ಬಿಡುವ ಹಂತದಲ್ಲಿ 8 ರಿಂದ 10 ದಿನಗಳವರೆಗೆ ಕೈಯಿಂದ ಪರಾಗಸ್ಪರ್ಶ ಮಾಡುವುದರಿಂದ ಶೇ. 20 ರಷ್ಟು ಹೆಚ್ಚು ಇಳುವರಿ ಪಡೆಯಬಹುದು.

<u>ಕಪ್ಪುತಲೆ ಕಂಬಳಿ ಹುಳು:</u> ಎಲೆಯ ತಳಭಾಗದಲ್ಲಿ ಗುಂಪಾಗಿದ್ದು ಮರಿಹುಳುಗಳು ಎಲೆಯ ಹಸಿರು ಭಾಗವನ್ನು ಕೆರೆದು ತಿನ್ನುತ್ತವೆ**<u>ಹತೋಟಿ:</u>** ಕೈಯಿಂದ ಆರಿಸಿ ತತ್ತಿಗಳ ನಾಶಮಾಡುವುದು. ಮೆಲಾಥಿಯೊನ್ ಪುಡಿಯನ್ನು (ಎಕರೆಗೆ 8 ಕೆ.ಜಿ.) ಗಿಡಗಳ ಮೇಲೆ ಧೂಳೀಕರಿಸಬೇಕು ಅಥವಾ ಕ್ವಿನಾಲ್ ಫಾಸ್ 2 ಮಿಲೀ/ಲೀ ಅಥವಾ ಲಾಮಡಾ ಸೈಲೊಥ್ರಿನ್ 0.5 ಮೀಲಿ/ಲೀ ಸಿಂಪಡಿಸಬೇಕು.**<u>ತೆನೆಕೊರಕ:</u>** ಮೊಗ್ಗು ಮತ್ತು ಕಾಳು ಕಟ್ಟುವ ಹಂತದಲ್ಲಿ ಹುಳುಗಳು ತೆನೆಯ ಹೂವಿನ ಭಾಗ ಮತ್ತು ಎಳೆಕಾಳುಗಳನ್ನು ತಿನ್ನುತ್ತವೆ.**<u>ಹತೋಟಿ:</u>** ಇಂಡಾಕ್ಸಿಕಾರ್ಬ್ 0.3 ಮಿಲೀ ಅಥವಾ ಎಂಡೋಸಲ್ಫಾನ್ 2 ಮಿಲೀ ಅಥವಾ ಅಸಿಪೇಟ್ 1 ಗ್ರಾಂ/ಲೀ ನೀರಿನಲ್ಲಿ ಬೆರಸಿ ಸಿಂಪಡಿಸಬೇಕು. ಸೂರ್ಯಕಾಂತಿಯ ನಂತರ ಆ ಜಮೀನಿನಲ್ಲಿ ಸೂರ್ಯಕಾಂತಿ ಬೆಳೆಯಬಾರದು.

**ಕಡಲೆ:** JG-11 (ಬರ ಮತ್ತು ಸೊರಗುರೋಗ ನಿರೋಧಕ) ತಳಿಯನ್ನು ಬಿತ್ತನೆ ಮಾಡಿ. ಟ್ರೈಕೋಡರ್ಮಾ 4 ಗ್ರಾಂ/ 1 ಬೀಜಕ್ಕೆ ಬೀಜೋಪಚಾರ ಮಾಡುವುದರಿಂದ ಸೊರಗು ರೋಗ ತಡೆಗಟ್ಟ ಬಹುದು.

<u>ಕಾಯಿಕೊರಕ:</u> ಮರಿಹುಳುಗಳು ಪ್ರಾರಂಭದಲ್ಲಿ ಎಲೆಯನ್ನು ಕೆರೆದು ತಿನ್ನುತ್ತವೆ. ನಂತರ ಮೊಗ್ಗು ಮತ್ತು ಕಾಯಿಗಳನ್ನು ಕೊರೆಯುತ್ತದೆ. ಕಾಯಿ ಕಟ್ಟುವ ಹಂತದಲ್ಲಿ ಬಂದು ಮರಿಹುಳು 20-30 ಕಡಲೆಕಾಯಿ ನಾಶ ಮಾಡುವ ಸಾಮರ್ಥ್ಯ ಹೊಂದಿರುತ್ತದೆ.

**<u>ಹತೋಟಿ:</u>** ಎಕರೆಗೆ 3 ರಂತೆ ಮೋಹಕಬಲೆ ಅಳವಡಿಸಬೇಕು. ತತ್ತಿನಾಶಕವಾದ ಪ್ರೊಫೊನೊಪಾಸ್ (3 ಮಿಲೀ/ಲೀ) ಸಿಂಪಡಿಸಬೇಕು. ಮೆಲಾಥಿಯೊನ್ (10 ಕೆ.ಜಿ. / ಎಕರೆ) ದೂಳೀಕರಿಸಬೇಕು ಅಥವಾ ಕ್ವಿನಾಲ್ ಫಾಸ್ (2 ಮಿಲೀ / ಲೀ) ಸಿಂಪಡಿಸಬೇಕು.

**ಶೇಂಗಾ:** ಶೇಂಗಾದ ಬುಡಕೊಳೆ ರೋಗ ತಡೆಗಟ್ಟಲು 4 ಗ್ರಾಂ ಟ್ರೈಕೋಡರ್ಮಾ ಶಿಲೀಂದ್ರನಾಶಕದಿಂದ ಪ್ರತಿ 1 ಕೆ.ಜಿ. ಬೀಜಕ್ಕೆ ಬೀಜೋಪಚಾರ ಮಾಡಬೇಕು. ಕಪ್ಪು ಮಣ್ಣಿನಲ್ಲಿ ಶೇಂಗಾ ಬಿತ್ತಿದ 25 ದಿನಗಳವರೆಗೆ ನೀರು ಹಾಯಿಸಬಾರದು, ಹಾಯಿಸಿದಲ್ಲಿ ಸೊಪ್ಪಿನ ಬೆಳವಣಿಗೆ ಹೆಚ್ಚಾಗಿ ಕಾಯಿ ಪ್ರಮಾಣ ಕಡಿಮೆಯಾಗುವುದು.

**ಭತ್ತ:** ಕಂದುಜಿಗಿಹುಳು: ಪ್ರೌಢ ಮತ್ತು ಅಪ್ಸರೆ ಜಿಗಿಹುಳು ಕಾಂಡದ ಮೇಲಿಂದ ರಸ ಹೀರುತ್ತದೆ. ಗರಿಗಳು ಹಳದಿ ಬಣ್ಣಕ್ಕೆ ತಿರುಗಿ ಸುಟ್ಟಂತೆ ಕಾಣುತ್ತದೆ. ಕಾಳು ಜೊಳ್ಳಾಗುತ್ತದೆ.

**<u>ಹತೋಟಿ:</u>** ಬುಪ್ರಫೆಜಿನ್ (1 ಮಿಲೀ/ಲೀ.) ಅಥವಾ ಅಸಿಟಾಮಿಫ್ರಿಡ್ (0.3 ಗ್ರಾಂ/ಲೀ) ಅಥವಾ ಥಯೋಮೆಥಾಕ್ಸಮ್ (0.5 ಗ್ರಾಂ/ಲೀ) ಸಿಂಪಡಿಸಬೇಕು.

**ದುಂಡಾಣು ಅಂಗಮಾರಿ ರೋಗ:** ತೆನೆಯ ಅಂಚಿನ ಗರಿಗಳು ಬಾಗಿ ತುದಿ ಹೆಡೆಯಂತೆ ಬಾಗಿರುತ್ತದೆ. ಎಲೆಯ ಅಂಚಿನಲ್ಲಿ ಉದ್ದನೆಯ ಒಣಗಿದ ಪಟ್ಟೆಗಳು ಕಂಡುಬರುತ್ತವೆ.

**<u>ಹತೋಟಿ:</u>** ಸ್ಟ್ರೆಪ್ಟೊಸೈಕ್ಲಿನ್ 0.4 ಗ್ರಾಂ ಮತ್ತು ತಾಮ್ರದ ಆಕ್ಸಿಕ್ಲೋರೈಡ್ (2 ಗ್ರಾಂ) ಮಿಶ್ರಮಾಡಿ ಸಿಂಪಡಿಸಬೇಕು.

**<u>ಬೆಂಕಿರೋಗ:</u>** ಗರಿಗಳ ಮೇಲೆ ಕಂದು ಚುಕ್ಕೆಗಳಾಗಿ ಎಲೆಗಳು ಒಣಗುತ್ತವೆ. ತೆನೆ ಕುತ್ತಿಗೆಯ ಭಾಗ ಕಪ್ಪು ಮಚ್ಚೆಯಾಗಿ ಕಾಳು ಜೊಳ್ಳಾಗುತ್ತವೆ.

**<u>ಹತೋಟಿ:</u>** ಟ್ರೈಸೈಕ್ಲ ಜೋಲ್ (0.6 ಗ್ರಾಂ / ಲೀ) ಅಥವಾ ಕಿಟಾಜಿನ್ (1 ಮಿಲೀ/ ಲೀ) ಅಥವಾ ಕಾರ್ಬನ್ ಡೈಜಿಮ್ (1 ಗ್ರಾಂ / ಲೀ) ಸಿಂಪಡಿಸಬೇಕು.

**ಪಶು ವಿಜ್ಞಾನ:**

ಭತ್ತವನ್ನು ಕಟಾವು ಮಾಡಿದ ನಂತರ, ಹುಲ್ಲನ್ನು ಚನ್ನಾಗಿ ಒಣಗಿಸಿ, ಕಂತೆ ಕಟ್ಟಿ ಬಣವೆ ಮಾಡಿಕೊಳ್ಳಬೇಕು. ಬಣವೆ ಮಾಡುವಾಗ ವಿವಿಧ ಪದರಗಳಲ್ಲಿ ದ್ವಿದಳ ಧಾನ್ಯದ ಮೇವನ್ನು (ಹುರುಳಿ, ಅಲಸಂದೆ, ಶೇಂಗಾ ಹೊಟ್ಟು) ಮಿಶ್ರಣ ಮಾಡುವುದು ಸೂಕ್ತ.ಜಾನುವಾರುಗಳಿಗೆ ಸೂಕ್ತವಾದ ಜಂತು ನಿವಾರಕ ಔಷಧಿಯನ್ನು ನೀಡಿ ಉಪಚರಿಸಬೇಕು.ಹೆಚ್ಚಾಗಿ ಮಳೆ ಬೀಳುತ್ತಿರುವ ಪ್ರದೇಶಗಳಲ್ಲಿ ಕುರಿ, ಆಡು ಹಾಗೂ ದನಗಳಲ್ಲಿ ಶ್ವಾಶಕೋಶದ ಸಂಬಂಧಿ ಖಾಯಿಲೆಗಳು ಹೆಚ್ಚಾಗುವ ಸಾಧ್ಯತೆಗಳಿದ್ದು ಅವುಗಳನ್ನು ತಪಾಸಣೆಗೆ ಒಳಪಡಿಸಿ ಪಶುವೈದ್ಯರಿಂದ ಸೂಕ್ತ ಚಿಕಿತ್ಸೆ ಪಡೆದುಕೊಳ್ಳಬೇಕು.

**ಮೀನು ಕೃಷಿ**

ಮೀನು ಮರಿಗಳನ್ನು ಹೊಂಡಗಳಲ್ಲಿ ಬಿಟ್ಟಿರುವ ರೈತರು 15 ದಿನ ಗಳಿಗೊಮ್ಮೆ ದನದ ಸಗಣಿಯನ್ನು ತಪ್ಪದೆ ಹಾಕಬೇಕು. ಇದು ಆರೋಗ್ಯಯುತ ಪ್ಲಾಂಕ್ಟನ್ ಸಾಂದ್ರತೆಯನ್ನು ಕಾಪಾಡಿಕೊಳ್ಳಲು ಸಹಕಾರಿ.ದೊಡ್ಡಗಾತ್ರದ ಮೀನು ಮರಿಗಳನ್ನು ಬಿಟ್ಟಿದ್ದು, 1-2 ತಿಂಗಳುಗಳಾಗಿದ್ದರೆ, ಚೀಲದಲ್ಲಿ ಮೇಲು ಆಹಾರ ಕೊಡುವ ಪದ್ಧತಿಯನ್ನು ಪ್ರಾರಂಭಿಸಬಹುದು.

ಮಳೆ ಹೇರಳವಾಗಿ ಸುರಿಯುತ್ತಿರುವ ಹಿನ್ನೆಲೆಯಲ್ಲಿ, ಹೊಂಡದ ಸುತ್ತ ಹಣ್ಣು-ತರಕಾರಿ ಬೀಜ-ಸಸಿಗಳನ್ನು ನೆಡುವುದು ಆದಾಯ-ಆರೋಗ್ಯಕ್ಕೆ ಸಹಕಾರಿ. ಹಾವು, ಕಪ್ಪೆ, ಶತ್ರು ಹಕ್ಕಿಗಳು ಮೀನು ಹೊಂಡಗಳಿಗೆ ಈಗ ಆಕರ್ಷಿತವಾಗುವುದು ಸಹಜ. ಹತೋಟಿಗಾಗಿ ಹಳೇ ಬಲೆಯನ್ನು

**ಸಂಪಾದಕರು ಮತ್ತು ಪ್ರಕಾಶಕರು:**
**ಕಾರ್ಯಕ್ರಮ ಸಂಯೋಜಕರು, ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ, ಎಲ್.ಐ.ಸಿ. ಕಾಲೋನಿ**
**ಲೇಔಟ್, ಬಿಐಇಟಿ ರಸ್ತೆ, ದಾವಣಗೆರೆ-577004, ಕರ್ನಾಟಕ**